ಒ.ಎಸ್. 125-2024
ಪಿ.ಡಬ್ಲ್ಯು. - 01

**ದಿನಾಂಕ 11-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - 1 ನೇ ಪ್ರತಿವಾದಿಯರ ಪರ ಎಸ್ ಜೆ ವಕೀಲರಿಂದಃ**

ನಾನು 2 ನೇ ತರಗತಿವರೆಗೆ ವ್ಯಾಸಂಗ ಮಾಡಿರುತ್ತೇನೆ. ನನಗೆ ಕನ್ನಡ ಓದಲು, ಬರೆಯಲು ಬರುವುದಿಲ್ಲ. ನಾನು ಈ ದಾವೆಯನ್ನು ಹಾಕಲು ವಕೀಲರ ಕಚೇರಿಗೆ 2 ಬಾರಿ ಹೋಗಿದ್ದೇನೆ. ಕೇಸನ್ನು ಹಾಕಲು ಮಾಹಿತಿಯನ್ನು ನನ್ನ ಮಗ ಕೊಟ್ಟಿರುತ್ತಾನೆ. ನನ್ನ ಮಗ ಏನು ಕೇಸನ್ನು ಹಾಕಿದ್ದಾನೆಂದು ನನಗೆ ಗೊತ್ತಿಲ್ಲ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಭೂನ್ಯಾಯ ಮಂಡಳಿಯಿಂದ ದಾಖಲೆಗಳನ್ನು ಪಡೆದು ನನ್ನ ಮಗ ವಕೀಲರಿಗೆ ಕೊಟ್ಟಿರುತ್ತಾನೆ. ನಾನು ಈ ದಿನ ನ್ಯಾಯಾಲಯಕ್ಕೆ ನನ್ನ ಮೊಮ್ಮಗ ಮಾಣಿ ಜೊತೆ ಬಂದಿರುತ್ತೇನೆ. ವಕೀಲರಿಗೆ ಮಾಹಿತಿ ಕೊಟ್ಟ ನನ್ನ ಮಗನ ಹೆಸರು ಸಂತೋಷ. ಮಾಣಿ ಸಂತೋಷನ ಮಗನಾಗಿರುತ್ತಾನೆ.

2. ಭೂನ್ಯಾಯ ಮಂಡಳಿಯಿಂದ ನನ್ನ ಮಗ ಯಾವ ಯಾವ ದಾಖಲೆಗಳನ್ನು ಪಡೆದಿದ್ದಾನೆಂದು ನನಗೆ ಗೊತ್ತಿಲ್ಲ. ಈ ಕೇಸನ್ನು ಯಾವ ದಾಖಲೆಗಳ ಆಧಾರದ ಮೇಲೆ ಸಲ್ಲಿಸಿದ್ದೇನೆಂದು ನನಗೆ ಗೊತ್ತಿಲ್ಲ. ಈ ಕೇಸನ್ನು ಯಾವ ಆಧಾರದ ಮೇಲೆ ಸಲ್ಲಿಸಿದ್ದೇನೆಂದು ನನಗೆ ಗೊತ್ತಿಲ್ಲ. ನಾನು ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನನ್ನ ವಕೀಲರ ಕಚೇರಿಯಲ್ಲಿ ಸಹಿ ಮಾಡಿರುತ್ತೇನೆ. ಸಹಿ ಮಾಡುವಾಗ ನಾನು, ನನ್ನ ಮಗ ಮತ್ತು ವಕೀಲರು ಇದ್ದೆವು.

3. ನಾನು ಖಾಯಂ ಆಗಿ ಉಡುಪಿ ತಾಲೂಕಿನ ಮೂಳೂರಿನಲ್ಲಿ ವಾಸ ಇರುತ್ತೇನೆ. ನನ್ನ ಮಗ ಬೇರೆ ಇರುತ್ತಾನೆ. ನಾನು ನನ್ನ ಅಕ್ಕನ ಮಗಳು ಲಕ್ಷ್ಮೀ ಜೊತೆ ಇರುತ್ತೇನೆ. ಲಕ್ಷ್ಮೀ ಎಂದರೆ ಈ ದಾವೆಯ 2 ನೇ ಪ್ರತಿವಾದಿ. ಕೇಸು ಬಗ್ಗೆ ಲಕ್ಷ್ಮೀಗೆ ಗೊತ್ತಿರುತ್ತದೆ. ಪ್ರತಿವಾದಿ 2 ರಿಂದ 5 ರವರು ಎಲ್ಲರೂ ಒಂದೇ ಎಂದರೆ ಸರಿ. 2 ರಿಂದ 5 ನೇ ಪ್ರತಿವಾದಿಯರು ಈ ಕೇಸು ದಾಖಲಿಸಿದ ನಂತರ ಕೇಸನ್ನು ನಡೆಸುತ್ತಿಲ್ಲ ಎಂದರೆ ಸರಿ. ಆವರೆಲ್ಲರಿಗೂ 1 ನೇ ಪ್ರತಿವಾದಿಯ ಮೇಲೆ ಬೇಜಾರು ಎಂದರೆ ಸರಿ.

4. ಈ ದಾವೆಯಲ್ಲಿ ನನ್ನ ವಿಳಾಸವನ್ನು ಏನೆಂದು ಕಾಣಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಮಗ ಸಂತೋಷ ಹೇರೂರಿನಲ್ಲಿದ್ದಾನೆ. ನನಗೆ 2 ಜನ ಮಕ್ಕಳು. ಅವರ ಹೆಸರು ಸಂತೋಷ ಮತ್ತು ಬೇಬಿ. ನನ್ನ ಮಗಳು ಬೇಬಿ ಮುಂಬೈಯಲ್ಲಿರುತ್ತಾಳೆ. ಮೂಳೂರಿನ ನಮ್ಮ ಮನೆಯ ಪಕ್ಕದಲ್ಲಿಯೇ 1 ನೇ ಪ್ರತಿವಾದಿ ಪ್ರತ್ಯೇಕ ಮನೆ ಮಾಡಿ ವಾಸವಾಗಿದ್ದಾರೆ. 1 ನೇ ಪ್ರತಿವಾದಿ ಮನೆಕಟ್ಟಿ 6-7 ವರ್ಷಗಳಾಗಿವೆ. ನಾನು 1 ನೇ ಪ್ರತಿವಾದಿಯ ಮನೆಯ ಗೃಹ ಪ್ರವೇಶಕ್ಕೆ ಹೋಗಿದ್ದೇನೆ. 1 ನೇ ಪ್ರತಿವಾದಿ ಮನೆ ಕಟ್ಟುವ ಬಗ್ಗೆ ನಾನು ಆಕ್ಷೇಪ ಮಾಡಿಲ್ಲ. ಅವರು ಯಾವ ಆಧಾರದ ಮೇಲೆ ಮನೆ ಕಟ್ಟುತ್ತಿದ್ದಾರೆಂದು ನಾನು ತಿಳಿದುಕೊಳ್ಳಲಿಲ್ಲ. ಅವರು ಮನೆ ಕಟ್ಟುವಾಗ ವಿಚಾರಿಸಲು ತೊಂದರೆ ಇರಲಿಲ್ಲ.

5. ನನ್ನ ಮಗ ಸಂತೋಷ ಹೋಟೆಲಿನಲ್ಲಿ ಕೆಲಸ ಮಾಡುತ್ತಾನೆ. ಎಲ್ಲಿ ಎಂದು ನನಗೆ ಗೊತ್ತಿಲ್ಲ. ನನ್ನ ಮಗ ಭೂನ್ಯಾಯ ಮಂಡಳಿಯಿಂದ ಪಡೆದ ದಾಖಲಾತಿಗಳು ನನ್ನ ಬಳಿ ಇವೆ. ಭೂನ್ಯಾಯ ಮಂಡಳಿಯಿಂದ ದಾಖಲಾತಿಗಳನ್ನು ಈ ಮೊದಲೇ ಪಡೆದುಕೊಂಡಿರುತ್ತೇನೆ. ದಾಖಲೆಗಳನ್ನು ದಾವೆ ಹಾಕುವ ಎಷ್ಟು ಸಮಯದ ಮೊದಲು ಪಡೆದಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ನೆನಪಿಲ್ಲ ಎಂದು ತಿಳಿಸಿರುತ್ತಾರೆ. ಭೂನ್ಯಾಯ ಮಂಡಳಿಯಿಂದ ದಾಖಲೆಗಳನ್ನು ಪಡೆದು ಎಷ್ಟು ವರ್ಷ ಆಯಿತು ಎಂದು ನೆನಪಿಲ್ಲ.

6. ಮಾಚು ಪೂಜಾರ್ತಿ ಎಂದರೆ ನನ್ನ ಅಕ್ಕ. ಅವರು ಮದುವೆಯಾಗಿ ಕಾಪುವಿಗೆ ಹೋಗಿರುತ್ತಾರೆ. ಅವರ ಗಂಡನಿಗೆ ಕೃಷಿ ಕೆಲಸ. ನನ್ನ ತಾಯಿ ಮೂಳೂರಿನವರು. ನನ್ನ ತಾಯಿ ನಾನು ಈಗ ಇರುವ ಮನೆಯಲ್ಲಿಯೇ ವಾಸವಿದ್ದರು. ನನ್ನ ತಾಯಿ ಈಗ ನಾನು ಇರುವ ಮನೆಯಲ್ಲಿ ವಾಸವಾಗಿದ್ದರು ಎನ್ನುವ ಬಗ್ಗೆ ದಾಖಲೆ ಇಲ್ಲ. ಅವರು ಅಲ್ಲಿ ಇದ್ದ ಬಗ್ಗೆ ಮನೆಯ ಸುತ್ತಮುತ್ತಲಿನವರಿಗೆ ಗೊತ್ತು. ಆ ದಾಖಲೆಗಳ ಬಗ್ಗೆ ಮನೆಯ ಅಕ್ಕಪಕ್ಕದವರನ್ನೇ ಕೇಳಬೇಕು. ನಾನು ಕಾಪುವಿನಲ್ಲಿ ಟೈಲರ ಆಗಿದ್ದೆ. ನನಗೆ ಒಳ್ಳೆಯ ಕೆಲಸ ಇತ್ತು.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.